# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ,
ನಂ-29, ವಿಜಯನಗರ ಎರಡನೇ ಹಂತ,
ಹಿನಕಲ್,
ಮೈಸೂರು-570017
ದೂರವಾಣಿ : 0821-2417107
Website: www.cescmysore.org
CIN: U40109KA2004SGC035177

ಸಹಾಯಕ ಕಾರ್ಯಪಾಲಕ ಇಂಜನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಬಿ.ಎಂ.ರಸ್ತೆ,
ಚನ್ನರಾಯಪಟ್ಟಣ-573116
ದೂರವಾಣಿ : 08176-255644
08176-256409
Email: aeecrpatna@cescmysore.org

ಸಂಖ್ಯೆ:ಸಕಾನಿಇಂ(ವಿ)/ಸ.ಇಂ(ತಾಂ)/ಜಸಂಸ/2017-18: 2141 ದಿನಾಂಕ: 10-07-17

ಲಗತ್ತು :

## ಜನಸಂಪರ್ಕ ಸಭಾ ನಡಾವಳಿ

* * * * *

ದಿನಾಂಕ: 07-07-2017 ರಂದು ಬೆಳಗ್ಗೆ 11:00 ಗಂಟೆಗೆ ಸೆಸ್ಕ್, ಚನ್ನರಾಯಪಟ್ಟಣ ಉಪವಿಭಾಗದಲ್ಲಿ ಅಧೀಕ್ಷಕ ಇಂಜನಿಯರ್(ವಿ), ಹಾಸನ ರವರ ಅಧ್ಯಕ್ಷತೆಯಲ್ಲಿ ನಡೆದ "ಜನಸಂಪರ್ಕ ಸಭೆ" ಯ ನಡಾವಳಿಗಳು.

ಹಾಜರಿದ್ದ ಅಧಿಕಾರಿ/ನೌಕರರು

ಶ್ರೀಯುತರುಗಳಾದ :

1. ಸುಚೇತನ — ಅಧೀಕ್ಷಕ ಇಂಜನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಹಾಸನ
2. ರಾಮಸ್ವಾಮಿ — ಕಾರ್ಯನಿರ್ವಾಹಕ ಇಂಜನಿಯರ್(ವಿ), ಸೆಸ್ಕ್, ಚನ್ನರಾಯಪಟ್ಟಣ
3. ಶಿವರಾಮು — ಲೆಕ್ಕಾಧಿಕಾರಿಗಳು, ಸೆಸ್ಕ್, ಚನ್ನರಾಯಪಟ್ಟಣ
4. ಕೆ.ಪಿ.ಜಯಪ್ಪ — ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಸೆಸ್ಕ್, ಚ.ರಾ.ಪಟ್ಟಣ
5. ಪರಮೇಶ್ — ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ನೋಡಲ್ ಕೇಂದ್ರ, ಕೆ.ಪಿ.ಟಿ.ಸಿ.ಎಲ್, ಚನ್ನರಾಯಪಟ್ಟಣ
6. ಪಲ್ಲವಿ — ಸಹಾಯಕ ಇಂಜನಿಯರ್(ವಿ), ತಾಂತ್ರಿಕ ಶಾಖೆ, ಚ.ರಾ.ಪಟ್ಟಣ.
7. ವಿರೂಪಾಕ್ಷ — ಸಹಾಯಕ ಇಂಜನಿಯರ್(ವಿ), ಹೌಸಿಂಗ್ ಬೋರ್ಡ್ ಶಾಖೆ, ಚ.ರಾ.ಪಟ್ಟಣ.
8. ಯತೀಶ್ ಕುಮಾರ್ — ಕಿರಿಯ ಇಂಜನಿಯರ್(ವಿ), ಹೇಮಾವತಿ ಶಾಖೆ, ಚ.ರಾ.ಪಟ್ಟಣ.
9. ರಂಗೇಗೌಡ ಹೆಚ್. — ಪ್ರಭಾರ ಕಿರಿಯ ಇಂಜನಿಯರ್(ವಿ), ಉದಯಪುರ ಶಾಖೆ.
10. ಮಹಾದೇವ — ಕಿರಿಯ ಇಂಜನಿಯರ್(ವಿ), ನುಗ್ಗೇಹಳ್ಳಿ ಶಾಖೆ.
11. ನಾಗರಾಜು ಕೆ.ಎಸ್ — ಕಿರಿಯ ಇಂಜನಿಯರ್(ವಿ), ಕುಂದೂರುಮಠ ಶಾಖೆ.

ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು. ಸಭೆಯಲ್ಲಿ ಈ ಕೆಳಕಂಡಂತೆ ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರ.ಸಂ. | ಗ್ರಾಹಕರ ಹೆಸರು ಮತ್ತು ವಿಳಾಸ | ವಿಷಯ | ನಡಾವಳಿಗಳು |
|---|---|---|---|
| 1 | ಜೆ.ಎಸ್.ನಂಜೇಗೌಡ, ಗೂರನಹಳ್ಳಿ, ಚನ್ನರಾಯಪಟ್ಟಣ. | ಕುರುವಂಕ ಗ್ರಾಮದ ಗೃಹ ಬಳಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ ಕುರಿತು ಮಾಹಿತಿ ಕೋರಿದರು. | ಅರ್ಜಿ ಸಲ್ಲಿಸಿದ ನಂತರ ಶಾಖಾಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಿ, ಮಂಜೂರಾತಿ ಪತ್ರ ನೀಡಲಾಗುವುದು. ನಂತರ ವೈರಿಂಗ್ ಮಾಡಿದ ಗುತ್ತಿಗೆದಾರರಿಂದ ಸಮಾಪನ ವರದಿ, ಅಗ್ರಿಮೆಂಟ್ ಪಡೆದು ಸರ್ವೀಸ್ ನೀಡಲಾಗುವುದೆಂದು ತಿಳಿಸಲಾಯಿತು. |

| | | | |
|---|---|---|---|
| 2 | ಎಂ.ಎಲ್.ಹರೀಶ್. ಮಲ್ಲೇನಹಳ್ಳಿ ಗ್ರಾಮ ಕಸಬಾ ಹೋಬಳಿ. ಚನ್ನರಾಯಪಟ್ಟಣ. | ಕುಡಿಯುವ ನೀರಿನ ಕೊಳವೆ ಬಾವಿಗೆ ನಿರಂತರ ಜ್ಯೋತಿ ವಿದ್ಯುತ್ ಅಳವಡಿಸಲು ಕೋರಿದರು | ಕುಡಿಯುವ ನೀರಿಗಾಗಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅರ್ಜಿ ನೋಂದಣಿ ಮಾಡಿದ ತಕ್ಷಣ ವಿದ್ಯುತ್ ಸಂಪರ್ಕದ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಲಾಯಿತು. |
| 3 | ಸತ್ತಿಗೌಡ. ಡಿ.ಕಾಳೇನಹಳ್ಳಿ. | ಮಳ್ಳೇನಹಳ್ಳಿ ಗ್ರಾಮದ ಒಳಗಡೆ ಧರ್ಮರಾಜು ಮನೆ ಹತ್ತಿರ ವಿದ್ಯುತ್ ತಂತಿ ಇಳಿ ಬಿದ್ದಿರುವ ಬಗ್ಗೆ ತಿಳಿಸಿ ಸರಿಪಡಿಸಲು ಸೂಚಿಸಿದರು. | ಸಹಾಯಕ ಇಂಜನಿಯರ್(ವಿ). ಹೌಸಿಂಗ್ ಬೋರ್ಡ್ ಶಾಖೆ ರವರಿಗೆ ತಕ್ಷಣವೇ ಸ್ಥಳ ಪರಿಶೀಲಿಸಿ ಸರಿಪಡಿಸಲು ತಿಳಿಸಲಾಯಿತು. |
| 4 | ಎಂ.ವಿ.ತಿಮ್ಮೇಗೌಡ. ಮಾರೇನಹಳ್ಳಿ. ಚ.ರಾ.ಪಟ್ಟಣ | ಮಾರೇನಹಳ್ಳಿ ಗ್ರಾಮಕ್ಕೆ ಕುಡಿಯುವ ನೀರಿನ ಪರಿವರ್ತಕದ ಸಮಸ್ಯೆ ಬಗ್ಗೆ ಹೇಳಿದರು. | ಮಾರೇನಹಳ್ಳಿ ಗ್ರಾಮದಲ್ಲಿ ವಿಫಲಗೊಂಡ ಪರಿವರ್ತಕವನ್ನು ತಕ್ಷಣವೇ ಬದಲಾಯಿಸಲು ಹೌಸಿಂಗ್ ಬೋರ್ಡ್ ಶಾಖಾಧಿಕಾರಿಗಳಿಗೆ ತಿಳಿಸಲಾಯಿತು. ಹಾಗೂ ಆ ಪರಿವರ್ತಕಕ್ಕೆ ಸಂಬಂಧಿಸಿದ ಅನಧಿಕೃತ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ತಿಳಿಸಲಾಯಿತು. ಹಾಗೂ ಅನಧಿಕೃತವಾಗಿ ಉಪಯೋಗಿಸುತ್ತಿರುವ ಪಂಪ್‌ಸೆಟ್‌ಗಳನ್ನು ಕಡಿತಗೊಳಿಸಲು ತಿಳಿಸಲಾಯಿತು. ಪುನಃ ಅಕ್ರಮವಾಗಿ ಉಪಯೋಗಿಸುತ್ತಿರುವುದು ಕಂಡುಬಂದಲ್ಲಿ ವಿದ್ಯುತ್ ಜಾಗ್ರತದಳ ಹಾಸನ ರವರಿಗೆ ದೂರು ನೀಡಲು ತಿಳಿಸಲಾಯಿತು. |

ಈ ಸಭೆಯನ್ನು ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 01:00 ಗಂಟೆಯವರೆಗೆ ನಡೆಸಿ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಗೆ ವಂದಿಸಿ ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ.

10/07/2012

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ).
ಚಾವಿಸನಿನಿ.. ಕಾ ಮತ್ತು ಪಾ ಉಪವಿಭಾಗ.
ಚನ್ನರಾಯಪಟ್ಟಣ.

ಪ್ರತಿಯನ್ನು :

1. ಮುಖ್ಯ ಇಂಜನಿಯರ್(ವಿ). ವಲಯ ಕಛೇರಿ. ಚಾವಿಸನಿನಿ.. ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ
2. ಪ್ರಧಾನ ವ್ಯವಸ್ಥಾಪಕರು. ಆ ಮತ್ತು ಮಾ.ಸಂ ಅಭಿವೃದ್ಧಿ ಕೇಂದ್ರ. ನಿಗಮ ಕಛೇರಿ. ಮೈಸೂರು ರವರ ಆದ್ಯ ಅವಗಾಹನೆಗಾಗಿ
3. ಅಧೀಕ್ಷಕ ಇಂಜನಿಯರ್(ವಿ). ಚಾವಿಸನಿನಿ.. ವೃತ್ತ ಕಛೇರಿ. ಹಾಸನ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಕಾರ್ಯನಿರ್ವಾಹಕ ಇಂಜನಿಯರ್(ವಿ). ಚಾವಿಸನಿನಿ.. ವಿಭಾಗ ಕಛೇರಿ. ಚನ್ನರಾಯಪಟ್ಟಣ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಎಲ್ಲಾ ಶಾಖಾಧಿಕಾರಿಗಳು, ಸೆಸ್ಕ್, ಚನ್ನರಾಯಪಟ್ಟಣ ಉಪವಿಭಾಗ ರವರ ಮಾಹಿತಿಗಾಗಿ
6. ಕಛೇರಿ ಕಡತಕ್ಕೆ.